**ದಿಃ 25.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

1. ಮೂಲ 1ನೇ ವಾದಿಯಾದ ಗಂಗಾಧರ ದೇಶಪಾಂಡೆರವರು ಮೃತರಾಗಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಮ್ಮ ಊರಿಗೂ ಬಡಿಗವಾಡ ಗ್ರಾಮಕ್ಕೂ ಅಂದಾಜು 4 ಕಿ.ಮೀ ಅಂತರ ಇರುತ್ತದೆ. ಪ್ರತಿವಾದಿ 3 ರವರು ನನಗೆ ಅವರ ಪರವಾಗಿ ಸಾಕ್ಷಿ ನುಡಿಯಲು ಯಾವುದೇ ಅಧಿಕಾರ ಪತ್ರವನ್ನು ನೀಡಿರುವುದಿಲ್ಲ ಎಂದರೆ ಸರಿ.

2. ಪ್ರತಿವಾದಿ 1 ರವರು ಬೆಳಗಾವಿಯಲ್ಲಿ ವಾಸವಾಗಿರುತ್ತಾರೆ. ಬಡಿಗವಾಡ ಗ್ರಾಮದ ರಿ ಸ ನಂ. 21 ರ ಒಟ್ಟು ಕ್ಷೇತ್ರ 22 ಎಕರೆ 33 ಗುಂಟೆ ಇರುತ್ತದೆ. ಸದರಿ 22 ಎಕರೆ 33 ಗುಂಟೆಯ ಜಮೀನಿನಲ್ಲಿ ಒಟ್ಟು 4 ಹಿಸ್ಸೆಗಳು ಇರುತ್ತವೆ. ಸದರಿ ಜಮೀನಿನಲ್ಲಿ ರಾಜೇಂದ್ರ ಸರ್ಜೆರಾವ ದೇಶಪಾಂಡೆರವರಿಗೆ 5 ಎಕರೆ 27 ಗುಂಟೆ ಜಮೀನು ಇತ್ತು ಎಂದರೆ ಸರಿ. ಅದರಂತೆ ಶ್ಯಾಮಾಜಿ ಗಣೇಶ ದೇಶಪಾಂಡೆರವರಿಗೆ 05 ಎಕರೆ 10 ಗುಂಟೆ ಜಮೀನು ಇತ್ತು ಎಂದರೆ ಸಾಕ್ಷಿಯು 5 ಎಕರೆ 28 ಗುಂಟೆ ಜಮೀನು ಇತ್ತು ಎಂದು ನುಡಿಯುತ್ತಾರೆ. ಅದರಂತೆ ಗಂಗೂಬಾಯಿ ಸಾಂಬಾಜಿ ದೇಶಪಾಂಡೆ ರವರಿಗೆ 05 ಎಕರೆ 10 ಗುಂಟೆ ಜಮೀನು ಇತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ರಾಮಚಂದ್ರ ದೇಶಪಾಂಡೆ ರವರಿಗೆ 2 ಎಕರೆ 34 ಗುಂಟೆ ಹಾಗೂ ಗಂಗೂಬಾಯಿ ಸಾಂಬಾಜಿ ದೇಶಪಾಂಡೆ ರವರಿಗೆ 2 ಎಕರೆ 34 ಗುಂಟೆ ಜಮೀನು ಇತ್ತು ಎಂದು ನುಡಿಯುತ್ತಾರೆ. ಗಂಗೂಬಾಯಿ ಸಾಂಬಾಜಿ ದೇಶಪಾಂಡೆ 1992 ರಲ್ಲಿ ಮೃತರಾಗಿರುತ್ತಾರೆಂದರೆ ನನಗೆ ಗೊತ್ತಿಲ್ಲ.

3. ಸಾಂಬಾಜಿ ದೇಶಪಾಂಡೆ ರವರಿಗೆ 1. ಗಂಗಾಧರ, 2. ಹಣಮಂತ 3. ವೆಂಕಟೇಶ ಎನ್ನುವ ಮೂರು ಜನ ಗಂಡುಮಕ್ಕಳು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಂಬಾಜಿ ದೇಶಪಾಂಡೆ ರವರು ಮೃತರಾದ ನಂತರ ಅವರ ಮೂರು ಜನ ಮಕ್ಕಳ ಹೆಸರಿನ ಮೇಲೆ

ಎಮ್ ಆರ್ ನಂಬರ-16169/ಟಿ ಆರ್ ನಂ.204 ರ ಪ್ರಕಾರ ಹೆಸರು ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಡೈರಿಯನ್ನು ಪ್ರಶ್ನಿಸಿ ನಾನು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಡೈರಿ ಪೋಕಳ ಡೈರಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಪೋಕಳ ಎಂಟ್ರಿ ಎಂದರೆ ನನ್ನ ಪ್ರಕಾರ ಖೊಟ್ಟಿ ಎಂಟ್ರಿಯಾಗಿರುತ್ತದೆ. ಸದರಿ ಪೋಕಳ ಎಂಟ್ರಿ ಯನ್ನು ಪ್ರಶ್ನಿಸಿ ನಾನು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿ.

4. ಬಡಿಗವಾಡ ಗ್ರಾಮದ ರಿ ಸ ನಂಬರ 21 ರಲ್ಲಿನ ರಾಜೇಂದ್ರ ಸರ್ಜೆರಾವ ದೇಶಪಾಂಡೆರವರ ಪಾಲಿಗೆ ಬಂದ 5 ಎಕರೆ 25 ಗುಂಟೆಯ ಜಮೀನು ಕಿಚಡಿ ಎನ್ನುವ ಕುಟುಂಬಕ್ಕೆ ಟೆನೆನ್ಸಿ ಮುಖಾಂತರ ಹೋಗಿರುತ್ತದೆ ಎಂದರೆ ಸಾಕ್ಷಿಯು ಕಿಚಡಿ ಕುಟುಂಬಕ್ಕೆ ಮತ್ತು ಕಟ್ಟೀಕಾರ ಕುಟುಂಬಕ್ಕೆ ಹಾಗೆ ಟೆನೆನ್ಸಿ ಮುಖಾಂತರ ಹೋಗಿರುತ್ತದೆ ಎಂದು ನುಡಿಯುತ್ತಾರೆ. ಶ್ಯಾಮಾಜಿ ಗಣೇಶ ದೇಶಪಾಂಡೆ ರವರ ಪಾಲಿಗೆ ಬಂದ ರಿ ಸ ನಂ-21 ರ 5 ಎಕರೆ 10 ಗುಂಟೆ ಜಮೀನು ಕಟ್ಟೀಕಾರ ಕುಟುಂಬಕ್ಕೆ ಟೆನೆನ್ಸಿ ಮುಖಾಂತರ ಹೋಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಎಲ್ಲ ಸಂಗತಿ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

5. ಬಡಿಗವಾಡ ಗ್ರಾಮದ ರಿ ಸ ನಂ-21 ರ ಪೈಕಿ ಗಂಗಾಧರ ಸಾಂಬಾಜಿ ದೇಶಪಾಂಡೆ ರವರಿಗೆ 5 ಎಕರೆ 10 ಗುಂಟೆ ಜಮೀನು ಇತ್ತು ಎಂದರೆ ಸರಿಯಲ್ಲ. ಸದರಿ 5 ಎಕರೆ 10 ಗುಂಟೆ ಜಮೀನು ಈ ದಾವೆಯ ದಾವಾ ಸ್ವತ್ತು ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ಗಂಗಾಧರ ಸಾಂಬಾಜಿ ದೇಶಪಾಂಡೆರವರಿಗೆ ರಿ ಸ ನಂಬರ-21 ರಲ್ಲಿ ಕೇವಲ 2 ಎಕರೆ 34 ಗುಂಟೆ ಜಮೀನು ಮಾತ್ರ ಇದ್ದು, ಸದರಿ ಜಮೀನು ಕಟ್ಟೀಕಾರ ಕುಟುಂಬಕ್ಕೆ ಟೆನೆನ್ಸಿ ಮುಖಾಂತರ ಹೋಗಿರುತ್ತದೆ ಎಂದು ನುಡಿಯುತ್ತಾರೆ.

6. ವಾದಿಯ ಕುಟುಂಬದ 2 ಎಕರೆ 34 ಗುಂಟೆ ಜಮೀನು ಕಟ್ಟೀಕಾರ ಕುಟುಂಬಕ್ಕೆ ಟೆನನ್ಸಿ ಮುಖಾಂತರ ಹೋಗಿರುತ್ತದೆ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಕಟ್ಟೀಕಾರ ಕುಟುಂಬದ ದುಂಡಪ್ಪ ಕಲ್ಲಪ್ಪ ಕಟ್ಟೀಕಾರರವರಿಗೆ ರಿ ಸ ನಂಬ-21 ರ ಪೈಕಿ ವಾದಿಯ 2 ಎಕರೆ 34 ಗುಂಟೆ, ಸರ್ಜೆರಾವ ದೇಶಪಾಂಡೆ ರವರ 1 ಎಕರೆ 36 ಗುಂಟೆ ಹಾಗೂ ಪ್ರತಿವಾದಿ 1ರವರ 20 ಗುಂಟೆ ಜಮೀನು ದುಂಡಪ್ಪ ಕಲ್ಲಪ್ಪ ಕಟ್ಟೀಕಾರರವರಿಗೆ ಟೆನನ್ಸಿ ಮುಖಾಂತರ ಬಂದಿದ್ದು ಹೀಗೆ ಒಟ್ಟು ರಿ ಸ ನಂಬರ-21 ರಲ್ಲಿನ 5 ಎಕರೆ 10 ಗುಂಟೆ ಜಮೀನು ದುಂಡಪ್ಪ ಕಲ್ಲಪ್ಪ ಕಂಟೀಕಾರವರಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಮೇಲೆ ತಿಳಿಸಿದ ರೀತಿ ಭೂ ನ್ಯಾಯ ಮಂಡಳಿಯಲ್ಲಿ 2002 ರಲ್ಲಿ ಆದೇಶವಾಗಿರುತ್ತದೆ. ಸದರಿ ಸಂಗತಿಯನ್ನು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

7. ದಾವಾ ಸ್ವತ್ತಿನ ಪೂರ್ವಕ್ಕೆ ಸಣ್ಣಭೀಮಪ್ಪ ಅಪ್ಪಯ್ಯ ಕಿಚಡಿ ರವರ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಇರುವ ಜಮೀನಿನ ಕ್ಷೇತ್ರ 5 ಎಕರೆ 25 ಗುಂಟೆ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ದಾವಾ ಸ್ವತ್ತಿನ ಪೂರ್ವಕ್ಕೆ ಪ್ರತಿವಾದಿ 1 ರವರ ಜಮೀನು ಇರುತ್ತದೆ. ಸದರಿ ಜಮೀನಿನ ಕ್ಷೇತ್ರ 5 ಎಕರೆ 8 ಗುಂಟೆ ಇದ್ದು, ನಾನು ಹಾಗೂ ನನ್ನ ಸಹೋದರನಾದ ಪ್ರತಿವಾದಿ 3 ರವರು ಸದರಿ 5 ಎಕರೆ 8 ಗುಂಟೆ ಜಮೀನನ್ನು 2010 ರಲ್ಲಿ ಪ್ರತಿವಾದಿ 1 ರವರ ಕಡೆಯಿಂದ ಖರೀದಿ ಮಾಡಿರುತ್ತೇವೆ. ಪ್ರತಿವಾದಿ 1ರವರು ಜೀವಂತ ಇರುತ್ತಾರೆ. ಸದರಿ ಪ್ರತಿವಾದಿ 1ರವರ ಸಾಕ್ಷಿ ವಿಚಾರಣೆ ಮಾಡಿಕೊಳ್ಳಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ.

8. ಈ ದಾವೆಯಲ್ಲಿ ಪ್ರತಿವಾದಿ 1 ರವರು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ. ಭೂ ನ್ಯಾಯ ಮಂಡಳಿಯಲ್ಲಿ ಅರ್ಜಿ ವಿಚಾರಣಾ ಹಂತದಲ್ಲಿರುವಾಗ ನಾನು ಜನಿಸಿರುವುದಿಲ್ಲ ಎಂದರೆ ಸಾಕ್ಷಿಯು ಮೌನವಾಗಿರುತ್ತಾರೆ. ನಾನು 1985 ರಲ್ಲಿ ಜನಿಸಿರುತ್ತೇನೆ. ಭೂ

ನ್ಯಾಯಮಂಡಳಿಯಲ್ಲಿ 2002 ರಲ್ಲಿ ಆದೇಶವಾಗಿರುತ್ತದೆ. ಪ್ರತಿವಾದಿ 1ರವರ ಹೆಸರು ದಾಖಲಾಗುವ ಪೂರ್ವದಲ್ಲಿ ಸದರಿ ಪ್ರತಿವಾದಿ 1 ರವರ ಜಮೀನಿಗೆ ಶ್ಯಾಮಜಿ ಗಣೇಶ ದೇಶಪಾಂಡೆರವರ ಹೆಸರು ದಾಖಲಿತ್ತು. ಶ್ಯಾಮಜಿ ಗಣೇಶ ದೇಶಪಾಂಡೆರವರ ಕಡೆಯಿಂದ ಪ್ರತಿವಾದಿ 1ರವರಿಗೆ ಹೇಗೆ ಜಮೀನು ಬಂತು ಎನ್ನುವ ಪ್ರಶ್ನೆಗೆ ಸಾಕ್ಷಿಯು ದತ್ತಕ ಆಧಾರದ ಮೇಲಿಂದ ಪ್ರತಿವಾದಿ 1 ರವರಿಗೆ ಜಮೀನು ಬಂದಿತ್ತು ಎಂದು ನುಡಿಯುತ್ತಾರೆ. ಹಾಗೇ ಪ್ರತಿವಾದಿ 1 ರವರಿಗೆ ದತ್ತಕದ ಆಧಾರದ ಮೇಲೆ ಜಮೀನು ಬಂದಿತ್ತು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ಪ್ರತಿವಾದಿ 1ರವರ ಕಡೆಯಿಂದ ನಾನು ಹಾಗೂ ನನ್ನ ಸಹೋದರ ಜಮೀನನ್ನು ಖರೀದಿಸುವ ಪೂರ್ವದಲ್ಲಿ ಅಕ್ಕಪಕ್ಕದ ಜಮೀನುದವರನ್ನು ವಿಚಾರ ಮಾಡಿಕೊಂಡು ದಾಖಲೆಗಳನ್ನು ಪರಿಶೀಲನೆ ಮಾಡಿ ಖರೀದಿ ಪಡೆದುಕೊಂಡಿರುತ್ತೇವೆ. ನಾನು ಸಾರ್ವಜನಿಕರಿಗೆ ವಕೀಲರ ಮೂಲಕ ಪತ್ರಿಕೆಯಲ್ಲಿ ಪ್ರತಿವಾದಿ 1ರವರ ಕಡೆಯಿಂದ ಜಮೀನನ್ನು ಖರೀದಿಸುತ್ತಿದ್ದೇವೆ ಎಂದು ಪತ್ರಿಕೆಯಲ್ಲಿ ಜಾಹೀರಾತು ನೀಡಿರುವುದಿಲ್ಲ ಎಂದರೆ ಸರಿ.

9. ರಂಗರಾವ ದೇಶಪಾಂಡೆರವರಿಗೆ ಪ್ರತಿವಾದಿ 1ರವರು ಮಗನಾಗಬೇಕು. ಪ್ರತಿವಾದಿ 1ರವರಿಗೆ ಎಷ್ಟು ಜನ ಸಹೋದರರು ಇರುತ್ತಾರೆ ಎಂಬುವುದು ನನಗೆ ಗೊತ್ತಿಲ್ಲ. ನಾನು ಖರೀದಿಸಿದ ಜಮೀನಿಗೆ ಪ್ರತಿವಾದಿ 1 ರವರಿಗೆ ಬಂದ ಜಮೀನಿನ ಕುರಿತು ದಾಖಲೆಗಳನ್ನು ನೋಡಿರುತ್ತೇನೆ. ಹಾಗೆ ಯಾವ ಡೈರಿಯನ್ನು ನೋಡಿ ಖರೀದಿ ಮಾಡಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಡೈರಿ ನಂಬರ-771 ರ ಡೈರಿಯನ್ನು ನೋಡಿರುವುದಾಗಿ ಉತ್ತರಿಸುತ್ತಾರೆ. ಸದರಿ ಡೈರಿ ಪ್ರಕಾರ 04 ಜನರ ಮಧ್ಯೆ ವಾಟ್ನಿಯಾಗಿ ಜಮೀನು ಬಂದಿರುತ್ತದೆ. ಸದರಿ ಡೈರಿ ಪ್ರಕಾರ 1. ಸರ್ಜೆರಾವ

ದೇಶಪಾಂಡೆ, 2. ಅನಂತ ದೇಶಪಾಂಡೆ, 3. ಶ್ಯಾಮಜೀ ದೇಶಪಾಂಡೆ ಹಾಗೂ 4. ಸಾಂಬಾಜಿ ಮತ್ತು ರಾಮಚಂದ್ರ ದೇಶಪಾಂಡೆ ರವರಿಗೆ ಕೂಡಿ ಒಂದು ಹಿಸ್ಸೆ ಬಂದಿರುತ್ತದೆ. ಸದರಿ ಡೈರಿಯು 1966 ರಲ್ಲಿ ಆಗಿರುತ್ತದೆ. ಸದರಿ ಡೈರಿಯಾದ ನಂತರ ಭೂ ನ್ಯಾಯ ಮಂಡಳಿಯಲ್ಲಿ ಕೇಸು ನಡೆದಿರುತ್ತದೆ ಎಂದರೆ ಸರಿ.

10. ದಾವಾ ಸ್ವತ್ತಿನ ಪಶ್ಚಿಮಕ್ಕೆ- ದುಂಡಪ್ಪ ಕಲ್ಲಪ್ಪ ಕಟ್ಟೀಕಾರರವರಿಗೆ ಸೇರಿದ 5 ಎಕರೆ 10 ಗುಂಟೆ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ದಾವಾ ಸ್ವತ್ತಿನ ಪಶ್ಚಿಮಕ್ಕೆ- ದುರದುಂಡಿ ಗ್ರಾಮದ ಸೀಮೆ ಇರುತ್ತದೆ. ದಾವಾ ಸ್ವತ್ತಿನ ಉತ್ತರಕ್ಕೆ- ವಡೇರಹಟ್ಟಿ ಕೆನಾಲ್ ಇರುತ್ತದೆ ಎಂದರೆ ಸರಿಯಲ್ಲ. ಅದರಂತೆ ದಾವಾ ಸ್ವತ್ತಿನ ದಕ್ಷಿಣಕ್ಕೆ- ಕೆಂಪಣ್ಣ ಕಟ್ಟೀಕಾರರವರ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಚಕ್ಕುಬಂದಿಯ ಮದ್ಯದಲ್ಲಿ ದಾವಾ ಸ್ವತ್ತು ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

11. 5 ಎಕರೆ 10 ಗುಂಟೆ ಜಮೀನಿನಲ್ಲಿ ಯಾವುದೇ ಪಟ್ಟಿಗಳು ಆಗಿರುವುದಿಲ್ಲ ಎಂದರೆ ಸಾಕ್ಷಿಯು ನಾನು, ನನ್ನ ತಮ್ಮನಾದ ಪ್ರತಿವಾದಿ 3 ರವರು ಖರೀದಿ ಮಾಡಿಕೊಂಡು 2 ಎಕರೆ 24 ಗುಂಟೆಯಂತೆ ಪಟ್ಟಿ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಪಟ್ಟಿಗಳಿಗೆ ನಕ್ಷೆಯನ್ನು ಮಾಡಿರುತ್ತಾರೆ. ಸದರಿ ನಕ್ಷೆಯಾಗುವ ಪೂರ್ವದಲ್ಲಿ ಮೃತ 1 ನೇ ವಾದಿಗೆ ನೋಟೀಸು ನೀಡಿದ್ದರಾ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಪ್ರತಿವಾದಿ 1ರವರು ನಮಗೆ ಖರೀದಿ ಕೊಡುವ ಪೂರ್ವದಲ್ಲಿ ಪ್ರತಿವಾದಿ 1ರವರು ಸರ್ವೆ ಮಾಡಿಸಿ ನಕ್ಷೆ ತಯಾರಿಸಿಕೊಂಡಿರುತ್ತಾನೆ. ದಾವಾ ಸ್ವತ್ತು ದಕ್ಷಿಣದ ಪಟ್ಟಿಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಕನಾಲ್ ನೀರಿನ ಸೌಲಭ್ಯ ಇರುತ್ತದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
**ಪ್ರ.ದಿ.&ನ್ಯಾ.ದಂ., ಗೋಕಾಕ.**